**ಕರ್ನಾಟಕ ಸರ್ಕಾರ**

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:.ವಿವಾದ:63/2015-16 ದಿ:24-06-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಶಂಕರ ಗೌಡ ತಂದೆ: ನಿಟ್ಟೂರು ಚೆನ್ನನಗೌಡ ಲೇಟ್
2) ಬಸವರಾಜ ಗೌಡ ತಂದೆ: ನಿಟ್ಟೂರು ಚೆನ್ನನಗೌಡ
ಊಳೂರು ಗ್ರಾಮ ತಾ: ಸಿರುಗುಪ್ಪ
3) ನಾಗಿರೆಡ್ಡಿ ತಂದೆ: ನಿಟ್ಟೂರು ಚೆನ್ನನಗೌಡ
ಮೆಟ್ರಿಗ್ರಾಮ ತಾ: ಹೊಸಪೇಟ್

**ಪ್ರತಿವಾದಿಗಳು**

ಎನ್. ಚೆನ್ನ ಬಸವನಗೌಡ
ತಂದೆ: ದೊಡ್ಡನಗೌಡ
ಊಳೂರು ಗ್ರಾಮ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ಮಟಿವಾದು ಸಂಖ್ಯೆ |
|---|---|---|---|---|
| ಉತ್ತನೂರು ಗ್ರಾಮ | 144J | 1-83 | H-10/ 2015-16 | 23/2015-16 |

ಪೀಠಿಕೆ:-

ಸಿರುಗುಪ್ಪ ತಾಲೂಕಿನ **ಉತ್ತನೂರುಗ್ರಾಮದ ಸ.ನಂ.144J** ವಿಸ್ತೀರ್ಣ 1-83 ಸೆಂಟ್ಸ್ ಜಮೀನಿಗೆ ಸಂಭಂದಿಸಿದಂತೆ ಪಾಲುವಿಭಾಗ ಪ್ರಕಾರ 1)ಶಂಕರಗೌಡ ತಂದೆ: ನಿಟ್ಟೂರು ಚೆನ್ನನಗೌಡ ಲೇಟ್ 2) ಬಸವರಾಜಗೌಡ ತಂದೆ:ನಿಟ್ಟೂರು ಚೆನ್ನನಗೌಡ 3) ನಾಗಿರೆಡ್ಡಿ ತಂದೆ: ನಿಟ್ಟೂರು ಚೆನ್ನನಗೌಡ ಇವರ ಹೆಸರಿಗೆ ಜಂಟಿ ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಎನ್. ಚೆನ್ನಬಸವನಗೌಡ ತಂದೆ: ದೊಡ್ಡನಗೌಡ, ಊಳೂರು ಗ್ರಾಮ** ಇವರು **ದಿ:21-9-2015** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **18-3-2016, 15-4-2016 ,20-5-2016 ಮತ್ತು 12-6-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

..ಗಳು

ವಾದಿಗಳಾದ 1) ಶಂಕರಗೌಡ ತಂದೆ: ಲೇಟ್ ನಿಟ್ಟೂರು ಚೆನ್ನನಗೌಡ ಊಳೂರು ಗ್ರಾಮ 2) ಬಸವರಾಜ ಗೌಡ ತಂದೆ: ಲೇಟ್ ನಿಟ್ಟೂರು ಚೆನ್ನನಗೌಡ ಊಳೂರು ಗ್ರಾಮ 3) ನಾಗಿರೆಡ್ಡಿ ತಂದೆ: ನಿಟ್ಟೂರು ಚೆನ್ನನಗೌಡ ಮೆಟ್ರಿ ಗ್ರಾಮ ಹೊಸಪೇಟೆ ತಾ:ಇವರು ಉತ್ತನೂರು ಗ್ರಾಮದ ಸ.ನಂ.**144J** ವಿಸ್ತೀರ್ಣ 1-83 ಸೆಂಟ್ಸ್ ಜಮೀನು ಪಾಲು ವಿಭಾಗ ಪತ್ರ ಪ್ರಕಾರ ಜಂಟಿ ಹೆಸರಿಗೆ ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ಎನ್. ಚೆನ್ನ ಬಸವನಗೌಡ ತಂದೆ: ದೊಡ್ಡನಗೌಡ ಊಳೂರುಗ್ರಾಮ ಇವರು ಸದರಿಆಸ್ತಿಯಲ್ಲಿ ತಮಗೂ ಪಾಲು ಬರಬೇಕೆಂದು ದಿ:21-9-2015 ರಂದು ನಿರಾಧಾರವಾಗಿ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ, ತಕರಾರುದಾರರು ವಿಚಾರಣೆಗೂ ಹಾಜರಾಗದೇ ಪೂರಕ ದಾಖಲೆಗಳನ್ನು ಸಲ್ಲಿಸದೆ ಲಿಖಿತ ಹೇಳಿಕೆಗಳನ್ನೂ ನೀಡಿರುವುದಿಲ್ಲ ಕಾರಣ ಅವರ ತಕರಾರು ಅರ್ಜಿಯನ್ನು ತಳ್ಳಿ ಹಾಕಿ ಪಾಲು ವಿಭಾಗ ಪತ್ರ ಪ್ರಕಾರ 1) ಶಂಕರಗೌಡ ತಂದೆ: ಲೇಟ್ ನಿಟ್ಟೂರು ಚೆನ್ನನಗೌಡ ಊಳೂರು ಗ್ರಾಮ 2) ಬಸವರಾಜ ಗೌಡ ತಂದೆ: ಲೇಟ್ ನಿಟ್ಟೂರು ಚೆನ್ನನಗೌಡ ಊಳೂರು ಗ್ರಾಮ 3) ನಾಗಿರೆಡ್ಡಿ ತಂದೆ: ನಿಟ್ಟೂರು ಚೆನ್ನನಗೌಡ ಮೆಟ್ರಿ ಗ್ರಾಮ ಹೊಸಪೇಟೆ ತಾ:ನಮ್ಮಗಳ ಜಂಟಿ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡುವಂತೆ ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

## ಪ್ರತಿವಾದಿಗಳು

ಪ್ರತಿವಾದಿಗಳಾದ ಎನ್.ಚೆನ್ನಬಸವನಗೌಡ ತಂದೆ:ದೊಡ್ಡನಗೌಡ ಊಳೂರುಗ್ರಾಮ ಇವರು ಉತ್ತನೂರು ಗ್ರಾಮದ ಸ.ನಂ.**144J** ವಿಸ್ತೀರ್ಣ 1-83 ಸೆಂಟ್ಸ್ ಜಮೀನು ಪಾಲು ವಿಭಾಗ ಪತ್ರ ಪ್ರಕಾರ 1) ಶಂಕರಗೌಡ ತಂದೆ: ಲೇಟ್ ನಿಟ್ಟೂರು ಚೆನ್ನನಗೌಡ ಊಳೂರು ಗ್ರಾಮ 2)ಬಸವರಾಜ ಗೌಡ ತಂದೆ: ಲೇಟ್ ನಿಟ್ಟೂರು ಚೆನ್ನನಗೌಡ ಊಳೂರು ಗ್ರಾಮ 3) ನಾಗಿರೆಡ್ಡಿ ತಂದೆ: ನಿಟ್ಟೂರು ಚೆನ್ನನಗೌಡ ಮೆಟ್ರಿ ಗ್ರಾಮ ಹೊಸಪೇಟೆ ಜಂಟಿ ಹೆಸರಿಗೆ ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ಸದರಿಆಸ್ತಿಯಲ್ಲಿ ತಮಗೂ ಪಾಲು ಬರಬೇಕೆಂದು ದಿ:21-9-2015 ರಂದು ನಿರಾಧಾರವಾಗಿ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದರೆ ತಕರಾರುದಾರರು ವಿಚಾರಣೆಗೂ ಹಾಜರಾಗದೇ ಪೂರಕ ದಾಖಲೆಗಳನ್ನು ಸಲ್ಲಿಸದೆ ಲಿಖಿತ ಹೇಳಿಕೆಗಳನ್ನೂ ನೀಡಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಪಾಲು ವಿಭಾಗ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಉತ್ತನೂರು ಗ್ರಾಮದ ಸ.ನಂ.**144J** ವಿಸ್ತೀರ್ಣ 1-83 ಸೆಂಟ್ಸ್ ಜಮೀನು ಪಾಲು ವಿಭಾಗ ಪತ್ರ ಪ್ರಕಾರ 1) ಶಂಕರಗೌಡ ತಂದೆ: ಲೇಟ್ ನಿಟ್ಟೂರು ಚೆನ್ನನಗೌಡ 2) ಬಸವರಾಜ ಗೌಡ ತಂದೆ: ಲೇಟ್ ನಿಟ್ಟೂರು ಚೆನ್ನನಗೌಡ 3) ನಾಗಿರೆಡ್ಡಿ ತಂದೆ: ನಿಟ್ಟೂರು ಚೆನ್ನನಗೌಡ ಇವರ ಜಂಟಿ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 24-06-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು,
ಸಿರುಗುಪ್ಪ ತಾಲೂಕು

ದಿ:...........

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ